ದಿನಾಂಕ. 28-06-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಪಾಟೀ ಸವಾಲು:** ಪ್ರತಿವಾದಿ 1 ಮತ್ತು 2 ರ ಪರ ಶ್ರೀ ಎಸ್.ಆರ್.ಬಿ. ವಕೀಲರಿಂದಃ

12. ನನ್ನ ದಾವಾ ಪತ್ರಕ್ಕೆ ಹಾಗೂ ಮುಖ್ಯ ವಿಚಾರಣೆಗೆ ಮಾಹಿತಿ ನಾನೇ ಕೊಟ್ಟಿರುತ್ತೇನೆ. ನಮ್ಮ ಕುಟುಂಬದ ವಂಶಾವಳಿ ಬಗ್ಗೆ ನನಗೆ ಮಾಹಿತಿ ಇದೆ. ನಮ್ಮ ವಂಶಾವಳಿಯಲ್ಲಿ ಏಸೋ ಯಾನೇ ಯಶವಂತ ರಾಮಾ ಮೇಸ್ತಾ ಎಂಬವರು ಮೂಲ ಪುರುಷ ಎಂದು ತಿಳಿಸಿದ್ದೇನೆ. ಅವರ ಹೆಂಡತಿಯ ಹೆಸರು ನನಗೆ ಗೊತ್ತಿಲ್ಲ. ದಾವೆಯಲ್ಲಿ 6 ಸ್ವತ್ತುಗಳನ್ನು ಕೇಳಿದ್ದೇನೆ. ದಾವಾ ಎ ಶೆಡ್ಯೂಲ್ ಆಸ್ತಿಯ 3 ನೇ ಸ್ವತ್ತು ಮಾತ್ರ ಯೆಸೋ ಯಾನೆ ಯಶವಂತ ರಾಮಾ ಮೇಸ್ತಾ ರವರಿಗೆ ಸಂರಕ್ಷಿತ ರೈತ ಎಂಬುದಾಗಿ ಬಂದ ಸ್ವತ್ತು ಇರುತ್ತದೆ ಎಂದರೆ ಸಾಕ್ಷಿ ಎಲ್ಲಾ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳು ಎಂದು ನುಡಿಯುತ್ತಾರೆ. ಆದ್ದರಿಂದ ದಾವಾ ಎ ಶೆಡ್ಯೂಲ್ ನ 3 ನೇ ಸ್ವತ್ತು ಮಾತ್ರ ಸದ್ರಿ ಯೆಸೋ ಯಾನೆ ಯಶವಂತ ರಾಮಾ ಮೇಸ್ತಾ ರವರ ಸ್ವತ್ತು ಎಂದರೆ ಸಾಕ್ಷಿ ಎಲ್ಲಾ ಸ್ವತ್ತುಗಳು ಪಿತ್ರಾರ್ಜೀತ ಸ್ವತ್ತುಗಳು ಎಂದು ನುಡಿಯುತ್ತಾರೆ. ಅವರು ಮೃತಪಟ್ಟ ನಂತರ ಆ 3 ನೇ ಸ್ವತ್ತಿಗೆ ಮಾತ್ರ ಅವರ ಹಿರಿಯ ಮಗ ರಾಮಾ ಯಶವಂತ ಆಚಾರಿ ರವರ ಹೆಸರಿನಲ್ಲಿ ಆ.ಕು.ಮೆ. ನಾತೆಯಿಂದ ಕಂದಾಯ ದಾಖಲೆಯಲ್ಲಿ ಹೆಸರು ಬಂತು ಎಂದರೆ ಸಾಕ್ಷಿ ಸುಳ್ಳು ಎಲ್ಲಾ ಆಸ್ತಿಗೂ ಅವರ ಹೆಸರು ಬಂತು ಎಂದು ನುಡಿಯುತ್ತಾರೆ. ಎಲ್ಲಾ ಆಸ್ತಿಗಳು ಅವರ ಹೆಸರಿನಲ್ಲಿ ಕಂದಾಯ ದಾಖಲೆಯಲ್ಲಿ ನಮೂದಾಗಿದ್ದ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಅವರ ಹೆಸರಿನಲ್ಲಿ ಯಾವಾಗ ದಾಖಲಾಯಿತು ಎಂದು ಗೊತ್ತಿಲ್ಲ.

13. ಮ್ಯೂಟೇಷನ್ ನಂ.1146 ದಿನಾಂಕ 24-12-1935 ರ ಪ್ರಕಾರ ದಾವಾ ಎಲ್ಲಾ ಆಸ್ತಿಗಳು ಅವರ ಹೆಸರಿಗೆ ದಾಖಲಾಗಿದೆ. ನಿಪಿ-21 ರಲ್ಲಿ 2 ಸರ್ವೆ ನಂಬರ್ ಗಳು ಮಾತ್ರ ಹೇಳಿವೆ ಎಂದರೆ ಸರಿ.

14. ಮ್ಯೂಟೇಷನ್ ಎಂಟ್ರಿ ನಂಬರ್ 2900 ರಲ್ಲಿ ಹೇಳಿರುವ ಬಿ ಶಡ್ಯೂಲ್ ನಾ 3 ನೇ ಆಸ್ತಿಯ ಎಂಟ್ರಿ ವಿರುದ್ಧ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ನಾವು ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ. ನನ್ನ ತಂದೆ ದಿನಾಂಕ 23-01-2009 ರಲ್ಲಿ ಮತ್ರ ಪಟ್ಟಿರುತ್ತಾರೆ. ನನ್ನ ತಂದೆ ಕೂಡ ಆ ಮ್ಯೂಟೇಷನ್ ವಿರುದ್ಧ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸಾಕ್ಷಿ ಸಲ್ಲಿಸಿದ್ದಾರೆ ಎಂದು ನುಡಿಯುತ್ತಾರೆ. ಆ ಬಾಬ್ತು ದಾಖಲೆಗಳು ನನ್ನ ಬಳಿ ಇದೆ. ಅವುಗಳನ್ನು ಹಾಜರು ಪಡಿಸಲು ತೊಂದರೆ ಇಲ್ಲ. ದಾವಾ ಬಿ ಶೆಡ್ಯೂಲ್ ನ 3 ನೇ ಆಸ್ತಿಯಲ್ಲಿ ನಮ್ಮ ವಾಸದ ಮನೆ ಇದೆ ಎಂದರೆ ಸರಿ. ಆ ಮನೆ 40 ವರ್ಷಗಳ ಹಿಂದಿನಿಂದಲೂ ಇತ್ತು. ಆ ಜಾಗದಲ್ಲಿ ಮೊದಲೆ ಮನೆ ಇತ್ತು. ಆ ಜಾಗ ಮನೆ ಸಹಿತ ಕೊಟ್ಟಿದ್ದಾರಾ ಎಂದರೆ ಸಾಕ್ಷಿ 5 ಗುಂಟೆ ಜಾಗ ಕೊಟ್ಟು ಆ ಮೇಲೆ ಕೊಡುತ್ತೇನೆ ಎಂದು ಹೇಳಿದರು ಹಾಗೂ ಆ ಮನೆ ನನ್ನ ಅಜ್ಜ ಕಟ್ಟಿರುವ ಮನೆ ಎಂದು ನುಡಿಯುತ್ತಾರೆ. ಸದ್ರಿ ಜಮೀನಿನಲ್ಲಿ ನಾವು ನಮ್ಮ ಸ್ವಂತ ವಾಸ್ತವ್ಯದ ಮನೆಯನ್ನು ನಿರ್ಮಿಸಿಕೊಂಡು ಈಗ್ಗೆ ಸುಮಾರು 60 ವರ್ಷಗಳಿಗಿಂತಲೂ ಹೆಚ್ಚಿನ ಅವಧಿಯಿಂದ ವಾಸ್ತವ್ಯ ಮಾಡಿಕೊಂಡು ಬರುತ್ತಿದ್ದೇವೆ ಎಂದು ಹೇಳಿರುವುದು ಸತ್ಯನಾ ಹಾಗೂ ಮೊದಲೆ ಮನೆ ಇತ್ತು ಎಂದು ಹೇಳುವುದು ಸತ್ಯನಾ ಎಂದರೆ ಸಾಕ್ಷಿ ಮೊದಲು ಚಿಕ್ಕ ಮನೆ ಇತ್ತು ನಂತರ ಈಗಿರುವ ಮನೆ ಕಟ್ಟಿದ್ದೇವೆ ಎಂದು ನುಡಿಯುತ್ತಾರೆ.

15. 1999 ನೇ ಇಸವಿಯಲ್ಲಿ ಕೊಟ್ಟ ದಾಖಲೆಗಳ ಮೂಲಕ ದಾವಾ ಬಿ ಶೆಡ್ಯೂಲ್ ನ 1 ಮತ್ತು 2 ನೇ ಸ್ವತ್ತನ್ನು ಮೃತ ಜಗನ್ನಾಥ ಆವು ಆಚಾರಿ ತನ್ನ ಹೆಸರಿಗೆ ದಾಖಲಿಸಿದ್ದಾರೆ. ಆ ಬಗ್ಗೆ ದಾಖಲೆ ನಾನು ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಹಾಜರು ಪಡಿಸಿದ್ದೇನೆ ಎಂದು ನುಡಿಯುತ್ತಾರೆ. ದಾವಾ ಎ ಶೆಡ್ಯೂಲ್ ನ ಹಾರವಾಡ ಗ್ರಾಮದ ಆಸ್ತಿಗಳನ್ನು ಕೃಷ್ಣ ಯಶವಂತ ಆಚಾರಿ ರವರ ಅನಕ್ಷರಸ್ಥತನ ಮತ್ತು ಮುಗ್ದತೆಯ

ಲಾಭವನ್ನು ಪಡೆದುಕೊಂಡು ದಿವಂಗತ ಆವು ಯಶವಂತ ಆಚಾರಿ ರವರು ಕುಟುಂಬದ ಮ್ಯಾನೇಜರ್ ನಾತೆಯಿಂದ ತನ್ನ ಹೆಸರಿನಲ್ಲಿ ದಾಖಲಿಸಿಕೊಂಡರು ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ಆವು ಯಶವಂತ ಆಚಾರಿ ಅವರ ಹೆಸರಿಗೆ 1978 ರಲ್ಲಿ ದಾಖಲಿಸಿಕೊಂಡಿದ್ದಾರೆ. ಅವರ ಹೆಸರಿಗೆ ಆಗಿರುವುದನ್ನು ನನ್ನ ತಂದೆಯಾಗಲಿ ನಾವಾಗಲಿ ಪ್ರಶ್ನಿಸಿಲ್ಲ ಎಂದರೆ ಸಾಕ್ಷಿ ಪ್ರಶ್ನಿಸಿದ್ದೇವೆ ಎಂದು ನುಡಿಯುತ್ತಾರೆ. ಅವರು ಮೃತಪಟ್ಟ ನಂತರ ಆತನ ಕುಟುಂಬದ ಕವಲಿನ ಹೆಸರಿನಲ್ಲಿ ದಾಖಲಾಗಿರುವ ಎಂ.ಆರ್. 59/2004-05 ಮತ್ತು ಎಂ.ಆರ್.44/2004-05 ಅನ್ನು ನಾವು ಪ್ರಶ್ನಿಸಿಲ್ಲ ಎಂದರೆ ಸಾಕ್ಷಿ ಪ್ರಶ್ನಿಸಿದ್ದೇವೆ ಎಂದು ನುಡಿಯುತ್ತಾರೆ. ಮೇಲೆ ಹೇಳಿದಂತ ಎಲ್ಲಾ ಎಂಟ್ರಿಗಳನ್ನು ಪ್ರಶ್ನಿಸಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

16. 1998 ರಲ್ಲಿ ಜಗನ್ನಾಥ ರವರ ಹೆಂಡತಿ ಪಾರ್ವತಿ ಜಗನ್ನಾಥ ಆಚಾರಿ ರವರ ಹೆಸರಿಗೆ ದಾಖಲಾಯಿತು. ದಾವಾ ಬಿ ಯ 3 ನೇ ಸ್ವತ್ತು ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡು ಇದೆ ಎಂದರೆ ಸರಿ. ಬೇರೆ ದಾವಾ ಆಸ್ತಿಗಳಿಗಿಂತ ದಾವಾ ಬಿ 3 ನೇ ಆಸ್ತಿಗೆ ಹೆಚ್ಚು ಬೆಲೆ ಇದೆ ಎಂದರೆ ಸರಿಯಲ್ಲ. ದಾವಾ ಜಮೀನುಗಳು ಪಿತ್ರಾರ್ಜಿತ ಆಸ್ತಿಯಾಗಿದ್ದು, ಪ್ರತಿವಾದಿಯರು ತಮ್ಮ ಇಷ್ಟ ಪ್ರಕಾರ ವಾಂಟಣೆ ಮಾಡಿಕೊಂಡು, ತಮ್ಮ ಕವಲಿನವರಿಗೆ ಹೆಚ್ಚಿನ ಕ್ಷೇತ್ರ ಹೋಗುವಂತೆ ಮಾಡಿಕೊಂಡು, ಕೃಷ್ಣ ಯಶವಂತ ಆಚಾರಿ ರವರ ಕವಲಿನವರಾದ ನಮಗೆ ಕನಿಷ್ಠ ಕ್ಷೇತ್ರವನ್ನು ವಾಂಟಣೆಯ ಮೂಲಕ ವಿಂಗಡಿಸಿ ಕೊಟ್ಟಿದ್ದು ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆಗ ಆಗಿನ ಕಾಲದ ಮಾರುಕಟ್ಟೆ ದರವನ್ನು ಗಮನದಲ್ಲಿಟುಕೊಂಡು ಯೇಸು ಯಾನೆ ಯಶವಂತ ರಾಮಾ ಮೇಸ್ತ್ರಾ ರವರಿಂದ ಬಂದ ದಾವಾ ಎ ಶೆಡ್ಯೂಲ್ ನ 3 ನೇ ಸ್ವತ್ತಿನಲ್ಲಿರುವ ನನ್ನ ತಂದೆಯ ಭಾಗದ ಹಕ್ಕಿಗೆ ಸೂಕ್ತವಾದ ದಾವಾ ಬಿ ಶೆಡ್ಯೂಲ್ ನ

ಒ.ಎಸ್. ನಂ.4/2022

ಪಿ.ಡಬ್ಲ್ಯೂ-1

3 ನೇ ಆಸ್ತಿಯನ್ನು ಸರಸನಿರಸಾವಾಗಿ ವಾಂಟಣಿ ಮೂಲಕ ನನ್ನ ತಂದೆಗೆ ಕೊಟ್ಟಿರುವುದು ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.